# ಶುಭ ನುಡಿಯೆ ಬಣ್ಣದ ಹಕ್ಕಿ

ನರ್ಸಿಂಗ್ ಕಲಿತು, ನಟನೆಯ ಮುರಳೀಗಾನಕ್ಕೆ ಮರುಳಾದವರು ಶುಭಾ ರಕ್ಷಾ. ವಿಶೇಷ ನೃತ್ಯಗಳಿಂದ ಮುಖ್ಯಪಾತ್ರಗಳ ಕಡೆಗೆ ಹೊರಳಿಕೊಳ್ಳುತ್ತಿರುವ ಅವರು, ಕನ್ನಡದ ಗಡಿ ದಾಟಿ, ಮಲಯಾಳಂ ಮತ್ತು ತೆಲುಗು ಭಾಷೆಗಳಿಗೂ ಲಗ್ಗೆಯಿಡುತ್ತಿದ್ದಾರೆ.

■ಪದ್ಮನಾಭ ಭಟ್

ನೀಳಕಾಯದ ಬೆಡಗಿ ಶುಭಾ ರಕ್ಷಾ ತಮ್ಮ ಮಾದಕ ನೋಟದ ಮೂಲಕವೇ ಪಡ್ಡೆಗಳ ಎದೆಯಲ್ಲಿ ಕಾವು ಉಕ್ಕಿಸಿದವರು. ಹಲವು ಸಿನಿಮಾಗಳಲ್ಲಿ ವಿಶೇಷ ನೃತ್ಯದಲ್ಲಿ ತೆರೆಯ ಮೆರುಗು ಹೆಚ್ಚಿಸಿದ ಇವರು 'ಆ್ಯಪಲ್ ಕೇಕ್', 'ಗುಡುಗು' 'ಮೂಕವಿಸ್ಮಿತ', 'ಮತ್ತೆ ಉದ್ಭವ'ಗಳಂಥ ಸಿನಿಮಾಗಳಲ್ಲಿ ನಟನೆಯಿಂದಲೂ ಗಮನಸೆಳೆದಿದ್ದಾರೆ.

ಹಾಸನದ ಚನ್ನರಾಯಪಟ್ಟಣದಲ್ಲಿ ಹುಟ್ಟಿದ ಶುಭಾ, ಓದಿದ್ದು ನರ್ಸಿಂಗ್. ಪಿಯುಸಿಯಲ್ಲಿಯೇ ಕಿರುತೆರೆಯ ಮೂಲಕ ನಟನೆಯ ಪಯಣವನ್ನು ಆರಂಭಿಸಿದ ಅವರ ಮೊದಲ ಧಾರಾವಾಹಿ 'ಮನೆಯೊಂದು ಮೂರು ಬಾಗಿಲು'. ಮಾಡೆಲಿಂಗ್, ಜಾಹೀರಾತು ನಟನೆಯ ಜೊತೆಗೇ ಅವರೊಂದು 'ವೈಟ್ ರಾಬಿಟ್ ಎಂಬ ಬುಟಿಕ್ ಅನ್ನೂ ನಡೆಸುತ್ತಿದ್ದಾರೆ.

ಕನ್ನಡದ ಜೊತೆಗೆ ಮಲಯಾಳಂ ಮತ್ತು ತೆಲುಗು ಚಿತ್ರರಂಗಕ್ಕೂ ಶುಭಾ, ತಮ್ಮ ನಟನೆಯ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವ ಸನ್ನಾಹದಲ್ಲಿದ್ದಾರೆ. 'ಮಲಯಾಳಂ ಸಿನಿಮಾವೊಂದರ ಚಿತ್ರೀಕರಣ ಈಗಾಗಲೇ ಶುರುವಾಗಬೇಕಾಗಿತ್ತು. ಆದರೆ ಕೊರೊನಾ ವೈರಸ್ ಹರಡಿರುವ ಕಾರಣಕ್ಕೆ ಚಿತ್ರೀಕರಣ ಸ್ಥಗಿತಗೊಂಡಿದೆ. ಜಪಾನ್‌ನಲ್ಲಿಯೇ ಚಿತ್ರೀಕರಣ ಮಾಡುವ ಉದ್ದೇಶ ನಮಗಿತ್ತು. ಆದರೆ ಅಲ್ಲಿಗೆ ಹೋಗುವ ಪರಿಸ್ಥಿತಿ ಈಗ ಇಲ್ಲ' ಎಂದು ತುಸು ಬೇಸರದಿಂದಲೇ ಅವರು ಹೇಳಿಕೊಳ್ಳುತ್ತಾಳೆ.

ಇದರ ಜೊತೆಗೇ ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ನಿರ್ಮಾಣವಾಗುತ್ತಿರುವ ಇನ್ನೊಂದು ಸಿನಿಮಾಗೂ ಅವರು ಸಹಿ ಹಾಕಿದ್ದಾರೆ. ಆದರೆ ಆ ಚಿತ್ರದ ಕುರಿತು ಮಾಹಿತಿಯನ್ನು ಅವರು ಬಿಟ್ಟುಕೊಡುವುದಿಲ್ಲ.

ಪಿಯುಸಿಯಲ್ಲಿದ್ದಾಗಲೇ ಕ್ಯಾಮೆರಾ ಎದುರಿಗೆ ಬಂದಿರುವ ಶುಭಾ, ಆಗಿನ ಚಿತ್ರರಂಗಕ್ಕೂ ಈಗಿನ ಚಿತ್ರರಂಗಕ್ಕು ಸಾಕಷ್ಟು ಬದಲಾವಣೆಗಳಾಗಿರುವುದನ್ನು ಗುರ್ತಿಸುತ್ತಾರೆ. 'ಅಂದಿಗೆ ಹೋಲಿಕೆ ಮಾಡಿದರೆ ಈಗ ತುಂಬ ಬದಲಾವಣೆಗಳಾಗಿವೆ. ಹೆಚ್ಚು ಸಿನಿಮಾಗಳು ತಯಾರಾಗುತ್ತಿವೆ. ಆದರೆ ಕಾಂಪಿಟೇಷನ್ ಕೂಡ ಅಷ್ಟೇ ಹೆಚ್ಚಿದೆ. ಈಗ ಈ ಪಾತ್ರಕ್ಕೆ ಇಂಥ ಕಲಾವಿದರೇ ಬೇಕು ಎಂದು ಸ್ಪಷ್ಟವಾಗಿ ಹೇಳುತ್ತಾರೆ. ಹಾಗೆಯೇ ನಟನೆ, ಮೇಕಿಂಗ್, ತಂತ್ರಜ್ಞಾನ ಎಲ್ಲದರ ಬಗ್ಗೆಯೂ ಒಂದು ರೀತಿಯ ಸ್ಪಷ್ಟತೆ ಬಂದಿದೆ' ಎನ್ನುವುದು ಅವರ ಅನುಭವದ ಮಾತು.

ನಟನೆಯ ಜೊತೆಗೆ ಜಾಹೀರಾತು ಕ್ಷೇತ್ರದಲ್ಲಿಯೂ ಶುಭಾ ತೊಡಗಿಕೊಂಡಿದ್ದಾರೆ. ಹಲವು ಖ್ಯಾತ ಬ್ರಾಂಡ್‌ನ ಉತ್ಪನ್ನಗಳ ಜಾಹೀರಾತಿನಲ್ಲಿ ಕಾಣಿಸಿಕೊಂಡ ಮುಖ ಅವರದ್ದು.

ಯಾವುದೇ ಸಿನಿಮಾದಲ್ಲಿ ನಟಿಸುವ ಅವಕಾಶ ಬಂದಾಗಲೂ ಆ ಪಾತ್ರಕ್ಕೆ ಮಾನಸಿಕವಾಗಿ ತಮ್ಮನ್ನು ಸನ್ನದ್ಧಗೊಳಿಸಿಕೊಳ್ಳುತ್ತಾರೆ ಶುಭಾ. 'ಪಾತ್ರಕ್ಕಾಗಿ ಮಾನಸಿಕವಾಗಿ ಮತ್ತು ದೈಹಿಕವಾಗಿ ನನ್ನನ್ನು ನಾನು ಸಿದ್ಧಗೊಳಿಸಿಕೊಳ್ಳುತ್ತೇನೆ. ಆ ಪಾತ್ರದ ಲುಕ್, ವರ್ತನೆ, ಭಾವನೆ ಎಲ್ಲವನ್ನೂ ಅಧ್ಯಯನ ಮಾಡುತ್ತೇನೆ. ಹಾಗೆ ಮಾಡಿದಾಗ ಮಾತ್ರ ಒಂದು ಪಾತ್ರಕ್ಕೆ ನಾವು ಜೀವ ತುಂಬಲು ಸಾಧ್ಯ. ಇದು ನಾನು ಪಾಲಿಸಿಕೊಂಡು ಬಂದಿರುವ ನಟನೆಯ ಸೂತ್ರ' ಎನ್ನುತ್ತಾರೆ ಶುಭಾ.

'ಅರುಂಧತಿ' ಸಿನಿಮಾದಲ್ಲಿ ಅನುಷ್ಕಾ ಶರ್ಮ ಕಾಣಿಸಿಕೊಂಡಿದ್ದಾರಲ್ಲಾ, ಅಂಥದ್ದೊಂದು ಪಾತ್ರದಲ್ಲಿ ನಟಿಸಬೇಕು ಎಂಬುದು ಶುಭಾ ಅವರಿಗಿರುವ ಬಹುದೊಡ್ಡ ಕನಸು. ಆ ಕನಸು ಸದ್ಯದಲ್ಲಿಯೇ ನನಸಾಗಲಿದೆ ಎಂಬ ಆಸೆ ಮತ್ತು ಅದರ ಮೂಲಕವೇ ವೃತ್ತಿಜೀವನದಲ್ಲಿ ಮೇಲೇರುತ್ತೇನೆಂಬ ಮಹತ್ವಾಕಾಂಕ್ಷೆ ಎರಡೂ ಶುಭಾ ಅವರಿಗೆ ಇದೆ. ■

